ದೇವಸ್ಥಾನದ ಸಮಿತಿಗಳು

1117 (386); ಶ್ರೀ ಬಣಕಾರ್ ಯು.ಬಿ.

ಅ) ರಾಜ್ಯದಲ್ಲಿ ಎ,ಬಿ,ಸಿ ವರ್ಗದ ಮುಜರಾಯಿ ದೇವಸ್ಥಾನ ಸಮಿತಿಗಳಿವೆಯೇ;

ಆ) ಈ ವರ್ಗಗಳ ದೇವಸ್ಥಾನ ಸಮಿತಿಗಳಲ್ಲಿ ಚುನಾಯಿತ ಸದಸ್ಯರಿದ್ದಾರೆಯೇ;

ಇ) ಈ ಸಮಿತಿಯ ಚುನಾವಣೆಗಳು ಎಷ್ಟು ವರ್ಷಕ್ಕೊಮ್ಮೆ ನಡೆಯುತ್ತದೆ;

ಈ) ಈ ದೇವಸ್ಥಾನ ಸಮಿತಿಗಳು ವಾರ್ಷಿಕ ಸಭೆ ಕರೆಯುತ್ತಿವೆಯೇ;

ಉ) ದಿನಾಂಕ:31.03.2014ಕ್ಕೆ ಎಷ್ಟು ಸಮಿತಿಗಳು ವಾರ್ಷಿಕ ಸಭೆ ಕರೆದಿವೆ; ಎಷ್ಟು ಸಮಿತಿಗಳು ವಾರ್ಷಿಕ ಸಭೆ ಕರೆದಿರುವುದಿಲ್ಲ (ವಿವರ ನೀಡುವುದು);

ಊ) ಈ ಎಲ್ಲಾ ಸಮಿತಿಗಳು ಪ್ರತಿ ವರ್ಷ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸುತ್ತಿವೆಯೇ?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಇವೆ.

ಆ) ಚುನಾಯಿತ ಸದಸ್ಯರುಗಳು ಇರುವುದಿಲ್ಲ.

ಇ) ದೇವಸ್ಥಾನಗಳ ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತಿಲ್ಲ. ಕಾಯ್ದೆಯ ಅನುಸಾರ ಅರ್ಹ ಅಭ್ಯರ್ಥಿಗಳನ್ನು 3 ವರ್ಷಗಳ ಅವಧಿಗೆ ವ್ಯವಸ್ಥಾಪನಾ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗುತ್ತದೆ.

ಈ) ಅಗತ್ಯಕ್ಕೆ ಅನುಗುಣವಾಗಿ ತುರ್ತು ಸಭೆಯನ್ನು ಅಥವಾ ಕನಿಷ್ಠ ತಿಂಗಳಿಗೆ ಒಮ್ಮೆಯಾದರೂ ವ್ಯವಸ್ಥಾಪನಾ ಸಮಿತಿಯ ಸಭೆಯನ್ನು ನಡೆಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಉ) ವಾರ್ಷಿಕ ಸಭೆಯನ್ನು ಕರೆಯುವ ಅವಕಾಶವನ್ನು ಕಾಯ್ದೆಯಲ್ಲಿ ಕಲ್ಪಿಸಿರುವುದಿಲ್ಲ.

ಊ) ಲೆಕ್ಕ ತಪಾಸಣೆ ಕೈಗೊಳ್ಳಲು ಕ್ರಮ ಜರುಗಿಸಲಾಗುತ್ತಿದೆ.

ಆರಾಧನಾ ಯೋಜನೆಯಲ್ಲಿ ಬಿಡುಗಡೆಯಾದ ಅನುದಾನ

1118 (388); ಶ್ರೀ ಬಣಕಾರ್ ಯು.ಬಿ.

ಅ) ರಾಜ್ಯದಲ್ಲಿ 2013–14 ಮತ್ತು 2014–15ನೇ ಸಾಲಿನಲ್ಲಿ ಆರಾಧನಾ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ಅನುದಾನವೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಈ ಸಾಲುಗಳಲ್ಲಿ ಖರ್ಚು ಮಾಡಿದ ಅನುದಾನವೆಷ್ಟು (ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) 2013–14 ಮತ್ತು 2014–15ನೇ ಸಾಲಿನಲ್ಲಿ ಆರಾಧನಾ ಯೋಜನೆ, ಪರಿಶಿಷ್ಟ ಜಾತಿ ಉಪಯೋಜನೆ, ಗಿರಿಜನ ಉಪಯೋಜನೆಗಳಡಿಯಲ್ಲಿ ಆಯವ್ಯಯದಲ್ಲಿ ಒದಗಿಸಿದ ಅನುದಾನವನ್ನು ಕ್ರೋಢೀಕರಿಸಿ 2013–14ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ₹ 15.00ಲಕ್ಷ ಮತ್ತು 2014–15ನೇ ಸಾಲಿನಲ್ಲಿ ₹ 11.60ಲಕ್ಷಗಳಂತೆ ಬಿಡುಗಡೆ ಮಾಡಲಾಗಿರುತ್ತಾದೆ.

ಆ) ಈ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಅನುದಾನಕ್ಕೆ ಸಂಬಂದಿಸಿದಂತೆ ಸರ್ಕಾರದ ಮಾರ್ಗಸೂಚಿಗಳನ್ವಯ ಆಯಾ ಜಿಲ್ಲಾ